

ಕೃಷಿ

# ನಾಡಮಾವಿಗೆ ನೂರಾರು ನೆಂಟರು

**ಹಣ್ಣು ಕೊಡುವುದು ಮಮತೆಯ ಸಂಕೇತ. ಈ ಮಮತೆ ಸಂಬಂಧಗಳನ್ನೂ ಬೆಸೆಯಬಹುದೆ? ಈ ಸಾಧ್ಯತೆ ಎಲ್ಲ ಹಣ್ಣುಗಳಿಗೂ ಇದೆಯೆಂದು ಹೇಳಲಾಗದಿದ್ದರೂ, ಮಾವಿನ ಹಣ್ಣಿನ ಮಹಿಮೆ ಸಾಮಾನ್ಯವಾದುದಲ್ಲ. ಕರಾವಳಿ ಕೇಂದ್ರಿತವಾಗಿ ರೂಪುಗೊಂಡಿರುವ ನಾಡಮಾವು ಮಿತ್ರರ 'ನಾಮಾಮಿ' ಬಳಗ ಮಾವಿನ ಅನನ್ಯತೆಗೆ ಸಂಕೇತದಂತಿದೆ.**

**■ ಸಂಧ್ಯಾ ಹೆಗಡೆ**

ನೂರು ವಸಂತ ಕಂಡಿರುವ ಮನೆ ಹಿತ್ತಲಿನ ಕಾಟುಮಾವು ಸಂತತಿ ಉಳಿವಿಗೆ ಪಣತೊಟ್ಟು ಕಸಿ ಕಡ್ಡಿ ಹಿಡಿದು ನರ್ಸರಿ ಸುತ್ತಿದವರು ಸುಳ್ಯದ ಕೃಷಿಕ ಜಯರಾಮ ಅಜ್ಜಾವರ.

'ಬಾಯ್ಮನೆ ಕಸಿ' ಹಣ್ಣಿನ ಸವಿಯಲ್ಲಿ ಮಿಂದೆದ್ದು ದೇಸಿ ತಳಿ ಸಂರಕ್ಷಣೆಗೆ ಜೀನ್ ಬ್ಯಾಂಕ್ ಅನ್ನೇ ಸೃಷ್ಟಿಸಿದವರು ವೃತ್ತಿಯಲ್ಲಿ ಪಶುವೈದ್ಯರಾಗಿರುವ ಮಂಗಳೂರಿನ ಡಾ. ಮನೋಹರ ಉಪಾಧ್ಯ.

ಇವರಿಬ್ಬರು, ತಮ್ಮ ಮಿತ್ರರೊಡಗೂಡಿ ಹೆಣೆದ ಕನಸಿನ ಚಿಗುರು 'ನಾಮಾಮಿ' ಅರ್ಥಾತ್ 'ನಾಡಮಾವು ಮಿತ್ರರು' ಬಳಗ. ದೇಸಿ ಹಣ್ಣುಗಳ ಸಂರಕ್ಷಣೆಯ ಚಳವಳಿಗೆ ಈ 'ನಾಮಾಮಿ' ಬಳಗದ ಕೊಡುಗೆ ದೊಡ್ಡದು.

ಅಚ್ಚ ಹಳದಿ ಬಣ್ಣ, ಗಜಗಾತ್ರ, ಕೊಂಚವೂ ನಾರು ಇಲ್ಲದ ಹೈಬ್ರೀಡ್ ಮಾವಿನ ಹಣ್ಣುಗಳು ಮಾರುಕಟ್ಟೆಯಲ್ಲಿ ವಿಜೃಂಭಿಸುತ್ತಿರುವ ಕಾಲದಲ್ಲಿ ಜಯರಾಮ ಅಜ್ಜಾವರ ಮತ್ತು ಮನೋಹರ ಉಪಾಧ್ಯರು, ಇವರೊಂದಿಗೆ, ಕಸಿ ಕಟ್ಟುವವರು, ಕಸಿ ತರಬೇತುದಾರರು, ತಳಿ ಮಾಹಿತಿದಾರರು ನಾಮಾಮಿ ತಂಡವನ್ನು ಕಟ್ಟಿ, ನೂರಾರು ಜನರಲ್ಲಿ ನಾಡಮಾವಿನ ಹುಚ್ಚು ಬೆಳೆಸಿದ್ದಾರೆ. ಈ ಬಳಗಕ್ಕೆ ದೇಸಿ ಮಾವು ಎಷ್ಟು ಆಪ್ಯಾಯಮಾನವೆಂದರೆ ಕಾಟುಮಾವು (ಕಾಡುಮಾವು) ಎಂದು ಕರೆಸಿಕೊಳ್ಳುವ ಊರಂಚಿನ ಮಾವಿಗೆ 'ನಾಡಮಾವು' ಎಂದು ನಾಮಕರಣ ಮಾಡಿದ್ದಾರೆ. ಅದು ಕಾಡಿನ ಬೆಳೆಯಲ್ಲ, ಶತಮಾನಗಳ ಇತಿಹಾಸದ ಸಾಕ್ಷಿಪ್ರಜ್ಞೆಯಂತಿರುವ ನಾಡಿನ ಫಲ ಎಂಬುದು ಅವರ ನಿಲುವು.

ಮಂಗಳೂರು ಕೇಂದ್ರಿತವಾಗಿ ಒಂದು ಹಾಗೂ ಸುಳ್ಯದಲ್ಲಿ ಇನ್ನೊಂದು ನಾಮಾಮಿ ಬಳಗವಿದೆ. ಇವೆರಡರ ಗುರಿ, ಆಶಯ ಒಂದೇ. ಮೇ ತಿಂಗಳೆಂದರೆ, ಮಾವಿನ ಋತುವಿನ ಉತ್ತುಂಗದ ಕಾಲ. ಆಗ ಈ ಮಾವು ಮಿತ್ರರು, ದೇಸಿ ತಳಿಯ ಮಾವಿನ ಹಣ್ಣುಗಳ ಹುಡುಕಾಟ, ಗೊರಟು ಸಂಗ್ರಹ, ಕಸಿ ಕಡ್ಡಿಗೆ ಹೊಂಚು ಹಾಕುವುದರಲ್ಲಿ ನಿರತರು. 'ನಾಮಾಮಿ' ವಾಟ್ಸ್ಆ್ಯಪ್ ಗ್ರೂಪ್ ಇವರ ಪ್ರಮುಖ ಸಂಪರ್ಕ ಸೇತು.

ಈ ಬಳಗ ಕಟ್ಟಲು ಆಸಕ್ತಿ ಮೊಳೆತಿದ್ದು ಹೇಗೆಂದು ಪ್ರಶ್ನಿಸಿದಾಗ ಮನೋಹರ ಉಪಾಧ್ಯರು ಹೇಳಿದ್ದು ಹೀಗೆ: '2022ರಲ್ಲಿ ಶ್ರೀಪಡ್ರೆಯವರು ಕೇರಳದ ಕಣ್ಣಪುರಂನಲ್ಲಿ ನಡೆಯುವ 'ನಾಟ್ಟುಮಾಂಚೋಟ್ಟಿಲ್' (ನಾಡು ಮಾಮರದ ಅಡಿಯಲ್ಲಿ) ಖಾಸಗಿ ಮಾವು ಮೇಳಕ್ಕೆ ಬರ್ತೀರಾ ಎಂದು ಕೇಳಿದರು. ಅಲ್ಲಿ ಮೇಳ ಸಂಘಟಿಸಿದ್ದ ಪೊಲೀಸ್ ಅಧಿಕಾರಿ ಶೈಜು ಮಚಾತಿ ಅವರ ದೇಸಿ ಮಾವಿನ ಬಗೆಗಿನ ಅದ್ಯಮ ಪ್ರೀತಿ ಕಂಡು ಬೆರಗಾದೆ. ಅವರ ಸಂರಕ್ಷಣಾ ಕ್ರಮ, ವೈಜ್ಞಾನಿಕ ದಾಖಲಾತಿಯು ಯಾವ ವಿಶ್ವವಿದ್ಯಾಲಯದ ಅಧ್ಯಯನಕ್ಕೂ ಕಮ್ಮಿ ಇಲ್ಲ. ಮೇಳ ಮುಗಿಸಿ ವಾಪಸ್ ರೈಲಿನಲ್ಲಿ ಬರುವಾಗ ಮೇಳದ್ದೇ ಗುಂಗು. ನಾನ್ಯಾಕೆ ನಮ್ಮ ಊರಿನಲ್ಲೂ ಇಂತಹುದೊಂದು ಕಾರ್ಯ ಕೈಗೆತ್ತಿಕೊಳ್ಳಬಾರದು ಎಂದು ಯೋಚಿಸಿದೆ.'



ಅಲ್ಬುಕರ್ಕ್ ಸಕ್ರೆಗುತ್ತಿ ಸೊಬಗು